# ಶ್ರೀಮಾತೆಯವರ ಪತ್ರಗಳು – ೧೪

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**



## ಪತ್ರ – ೭೬

೨೯.೫.೧೯೧೨

೧೬ನೇ ಜ್ಯೇಷ್ಠ, ಉದ್ಬೋಧನ ಆಫೀಸ್

ಶುಭವಾಗಲಿ.

ತಾಯಿ, ನಿನ್ನ ಪತ್ರ ಸಿಕ್ಕಿ ಸಮಾಧಾನವಾಯಿತು. ಸದ್ಯ ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ರಾಧು ಈಗ ಚೆನ್ನಾಗಿದ್ದಾಳೆ. ಗೌರಿ ದಾಸಿಯ ಬಳಿಗೆ ಹೋಗಲು ನಿನಗೆ ಇಚ್ಛೆ ಇದ್ದರೆ ನೀನು ಹೋಗು.. ಈ ವಿಷಯದಲ್ಲಿ ನಾನೇನು ಹೇಳಲಿ ? ಅದು ನಿನ್ನ ಇಚ್ಛೆ. ನೀವೆಲ್ಲರೂ ನನ್ನ ಆಶೀರ್ವಾದ ಸ್ವೀಕರಿಸಿ. ಸುಮತಿ ಅಲ್ಲಿ ಇದ್ದರೆ ಅವಳಿಗೆ ನನ್ನ ಆಶೀರ್ವಾದ ತಿಳಿಸು. ಮಧ್ಯೆ ಮಧ್ಯೆ ನಿಮ್ಮೆಲ್ಲರ ಯೋಗಕ್ಷೇಮವನ್ನು ತಿಳಿಸಿ ಸಮಾಧಾನ ಕೊಡಬೇಕು.

ಇತಿ ಆಶೀರ್ವಾದ ನೀಡುವ,

ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಮತಿ ಸರಯೂಬಾಲಾ ಸೇನಗುಪ್ತ*

*C/O Sj.Girish Ch. Sen*

*Meherpur (Nadia)*

## ಪತ್ರ – ೭೭

೨೯.೮.೧೯೧೨

೧೩ನೇ ಭಾದ್ರಪದ , ಕೊಲ್ಕತ್ತಾ

ಶುಭವಾಗಲಿ.

ಮಗೂ, ನಿನ್ನ ಪತ್ರ ಸಿಕ್ಕಿ ಸಮಾಧಾನವಾಯಿತು. ಸ್ವಾಮೀಜಿಯ ಜೀವನ ಚರಿತ್ರೆ ಪ್ರಕಟವಾಗುತ್ತಿದೆ ಎಂದು ಕೇಳಿ ಸಂತೋಷವಾಯಿತು. ಅದು ಸುಪ್ರಸಿದ್ಧವಾಗಲಿ ಎಂದು ಆಶೀರ್ವಾದ ಮಾಡುತ್ತಿದ್ದೇನೆ. ಇಲ್ಲಿ ಎಲ್ಲರೂ ಕ್ಷೇಮ. ನಾನು ಚೆನ್ನಾಗಿದ್ದೇನೆ. ಶರತ್ ಮೊದಲಾದವರು ಚೆನ್ನಾಗಿದ್ದಾರೆ. ಮಿಸೆಸ್ ಸೇವಿಯರ್ ಹಾಗೂ ಉಳಿದ ಎಲ್ಲರಿಗೂ ನನ್ನ ಆಶೀರ್ವಾದ ತಿಳಿಸು. ಮತ್ತು ನಿನಗೂ ನನ್ನ ಆಶೀರ್ವಾದ. ಶ್ರೀ ಶ್ರೀ ಠಾಕೂರರು ಇದ್ದಾರೆ, ಅವರೇ ನಿನಗೆ ಮಂಗಳವನ್ನುಂಟುಮಾಡುವರು. ನೀನು ಕಳುಹಿಸಿರುವ 'ಆಪ್‌ಲ್ ಮೊರಬ್ಬಾ' ಸಿಕ್ಕಿದೆ.

ಇತಿ ಆಶೀರ್ವಾದ ನೀಡುತ್ತಿರುವ,

ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swami Virajananda*

*Prabudha Bharat Office*

*Mayavati, Lohaghat (Almora)*

## ಪತ್ರ – ೭೮

ಜೈ ಮಾ

೮.೧೦.೧೯೧೩

ಜಯರಾಂಬಾಟಿ, ೨೩ ಆಶ್ವಯುಜ

ಪರಮ ಶುಭಾಶಯಗಳು.

ಮಗೂ, ನಿನ್ನ ಕಾಯಿಲೆಯ ಬಗ್ಗೆ ಕೇಳಿ ಎಲ್ಲಿಲ್ಲದ ದುಃಖವುಂಟಾಯಿತು. ನಾನು ಆಶೀರ್ವಾದ ಮಾಡುತ್ತಿದ್ದೇನೆ. ನೀನು ಖಂಡಿತವಾಗಿ ಆರೋಗ್ಯವನ್ನು ಹೊಂದುವೆ. ನಿನಗೆ ಯಾವ ಭಯವೂ ಇಲ್ಲ. ನಿನ್ನ ಇಷ್ಟದೇವತೆ ನಿನ್ನನ್ನು ರಕ್ಷಿಸುವನು. ನಾನು ಬಹುಮಟ್ಟಿಗೆ ಚೆನ್ನಾಗಿರುವೆನು. ನೀನು ನನ್ನ ಸ್ನೇಹ ಆಶೀರ್ವಾದಗಳನ್ನು ಸ್ವೀಕರಿಸು. ಇತಿ,

ಆಶೀರ್ವಾದ ನೀಡುತ್ತಿರುವ

ನಿನ್ನ ತಾಯಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಸುರೇಂದ್ರ ನಾಥ ಗುಪ್ತ*
*ಪೋಸ್ಟ್ ಆಫೀಸ್: ಶ್ರೀಹಟ್ಟ, ಮಿರಾಬಜಾರ್; ಜಿಲ್ಲೆ: ಶ್ರೀಹಟ್ಟ*

*ಜೈ ಮಾ*
*ಜಯರಾಂಬಾಟಿ, ೨೩ ಆಶ್ವಯುಜ*

*ಪ್ರಿಯ ಸುರೇಂದ್ರ ಅಣ್ಣ,*

*ನಿನ್ನ ಕಾಯಿಲೆಯ ಬಗ್ಗೆ ಕೇಳಿ ಎಲ್ಲಿಲ್ಲದ ದುಃಖವಾಯಿತು. ಆದರೆ ಶ್ರೀಮಾತೆಯವರು ಯಾವ ರೀತಿಯಲ್ಲಿ ಆಶೀರ್ವಾದ ಮಾಡಿದ್ದಾರೆಂದರೆ, ಅದರಿಂದ ನೀನು ಶೀಘ್ರವಾಗಿ ಆರೋಗ್ಯ ವನ್ನು ಹೊಂದುವೆ. ಇದರಲ್ಲಿ ಸಂದೇಹವಿಲ್ಲ. ಮಧ್ಯೆ ಮಧ್ಯೆ ನಿನ್ನ ಪತ್ರ ಸಿಗುವುದೆಂದು ಬಯಸುತ್ತಿದ್ದೇನೆ. ತರಕಾರಿ, ಸೊಪ್ಪು ಬೆಳೆ ಸಲು ಪ್ರಯತ್ನಿಸುತ್ತಿದ್ದೇನೆ. ನಾನು ಅದೇ ರೀತಿ ಇದ್ದೇನೆ. ನಿನಗೆ ನನ್ನ ಸ್ನೇಹಪೂರ್ವಕ ವಂದನೆಗಳು*

*ಇತಿ,*
*ನಿನ್ನ ಜ್ಞಾನಾನಂದ*

Note – ಶ್ರೀಮಾತೆಯವರ ಪತ್ರದೊಂದಿಗೆ ಇದ್ದ ಈ ಪತ್ರ ವನ್ನು ಅದೇ ರೀತಿ ಇಲ್ಲಿ ಕೊಡಲಾಗಿದೆ.

**ಪತ್ರ – ೭೯**

೨೧.೧೧. ೧೯೧೨
Nov. ೨೧
ರಾಮಕೃಷ್ಣ ಅದ್ವೈತ ಆಶ್ರಮ, ಕಾಶಿಧಾಮ

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿ ತುಂಬಾ ಸಮಾಧಾನವಾಯಿತು. ಇಂದಿಗೆ ೧೬, ೧೭ ದಿನಗಳಿಂದ ನಾವು ಈ ವಿಳಾಸದ ಸ್ಥಳದಲ್ಲಿ ದ್ದೇವೆ. ಸದ್ಯ ಇಲ್ಲಿ ಕ್ಷೇಮ. ನಾನು ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ. ಅದೇ ರೀತಿ ಸೊಸೆಗೂ ಮತ್ತು ಮಕ್ಕಳಿಗೂ ತಿಳಿಸು. ಶ್ರೀ ಶ್ರೀ ಠಾಕೂರರು ನಿಮ್ಮನ್ನೆಲ್ಲಾ ಚೆನ್ನಾಗಿಟ್ಟಿರಲಿ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*Shriman Tarak Nath Roy Chowdhury*
*ಪೋಸ್ಟ್: ಕಠಿಯಾದಿ*
*ಸಬ್ ರಿಜಿಸ್ಟರ್ ಆಫೀಸ್*
*ಜಿಲ್ಲೆ: ಮೈಮನ್‌ಸಿಂಹ*

**ಪತ್ರ – ೮೦**

೨೫.೧೧.೧೯೧೨
ಶ್ರೀ ರಾಮಕೃಷ್ಣ ಅದ್ವೈತ ಆಶ್ರಮ
ಲಾಕ್ಸಾ, ಕಾಶೀಧಾಮ
೨೯, ಕಾರ್ತಿಕ

ಶುಭವಾಗಲಿ.

ಇಂದಿಗೆ ೧೦ ದಿನಗಳಿಂದ ಇಲ್ಲಿಗೆ ಬಂದಿದ್ದೇನೆ. ಹಾಗೆಯೇ ಸ್ವಲ್ಪ ದಿನ ಇಲ್ಲಿರುತ್ತೇನೆ. ಇಲ್ಲಿ ಕ್ಷೇಮ. ನೀನೂ ಕ್ಷೇಮವಾಗಿರುವೆ ಎಂದು ಆಶಿಸುತ್ತೇನೆ. ನಿನಗೆ ನನ್ನ ಆಶೀರ್ವಾದ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಶ್ರೀಯುತ ಸುರೇಂದ್ರ ನಾಥ ಗುಪ್ತ*
*ಪೋಸ್ಟ್ ಆಫೀಸ್: ಶ್ರೀಹಟ್ಟ Sylhet*
*ಮಿರಾ ಬಜಾರ್ , ಸೂರ್ಯ ಬಾಬುರ್ ಬಾಸಾ*
*Sylhet in Assam ( Dt. Sylhet ) ಜಿ: ಶ್ರೀಹಟ್ಟ*

**ಪತ್ರ – ೮೧**

೧೯.೧೨.೧೯೧೨
೩ನೇ ಪೌಷ, ಲಾಕ್ಸಾ, ಕಾಶೀಧಾಮ

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ಸದ್ಯ ನಾವೆಲ್ಲಾ ಇಲ್ಲಿ ಚೆನ್ನಾಗಿದ್ದೇವೆ. ಮಠದಲ್ಲಿ ಎಲ್ಲವೂ ಕ್ಷೇಮ. ನೀವೆ ಲ್ಲರೂ ಚೆನ್ನಾಗಿದ್ದೀರಿ ಎಂದು ಆಶಿಸುತ್ತೇನೆ. ನಿನಗೆ ನನ್ನ ಆಶೀ ರ್ವಾದ. ಸೊಸೆಗೂ ಮತ್ತು ಮಕ್ಕಳಿಗೂ ಆಶೀರ್ವಾದ ತಿಳಿಸು. ಈ ತಿಂಗಳ ಕೊನೆಯಲ್ಲಿ ಕೊಲ್ಕತ್ತಕ್ಕೆ ಹೋಗುವ ಇಚ್ಛೆ ಇದೆ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*Taraknath Roy Chowdhury*
*Sub Registrar*
*Kathiadi (Mymensingh)*

**ಪತ್ರ – ೮೨**

Luxa, ಕಾಶಿಧಾಮ
೨೭.೧೨.೧೯೧೨

ಶುಭವಾಗಲಿ,

ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನೀನು ನನ್ನ ಆಶೀ ರ್ವಾದವನ್ನು ಸ್ವೀಕರಿಸು. ಇಲ್ಲಿ ಕ್ಷೇಮ. ಶ್ರೀ ಠಾಕೂರರ ಧ್ಯಾನ, ಚಿಂತನೆ ಮಾಡುತ್ತಿರು. ಹಾಗೂ ಅವರನ್ನು ಪ್ರಾರ್ಥಿಸುತ್ತಿರು.

ಇತಿ ಆಶೀರ್ವಾದ ಮಾಡುತ್ತಿರುವ,
ನಿನ್ನ ಮಾತೆ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಶ್ರೀಯುತ ಸುರೇಂದ್ರ ನಾಥ ಗುಪ್ತ*
*ಆಶೀರ್ವಾದ ಸ್ವೀಕರಿಸುವ*
*C/O ಶ್ರೀಯುತ ವರದಾ ಮೋಹನ ದಾಸ ಬಿ.ಎಲ್*
*ಗಿರ್ಜಾರ್ ಪಶ್ಚಿಮ — ಶ್ರೀಹಟ್ಟ, Sylhet P. O.( Dt. Sylhet)*